ನಗುವನ್ನು ಕೊಂಡುಕೊಳ್ಳುವ ಹಾಗಿದ್ದರೆ! ನಾವು ಮತ್ತೆ ಮಗುವಾಗುವ ಹಾಗಿದ್ದರೆ ಅದೆಂಥಾ ಸುಖ ಎಂದು ನಾವೀಗ ಕರುಬುವುದು. ಅದಕ್ಕೇ ಬೇಂದ್ರೆ ಅಜ್ಜ 'ಒಂದೆ ಬಾಲ್ಯ ಒಂದೆ ಹರೆಯ ನಮಗದಷ್ಟೇ ಏತಕೊ' ಎಂದು ಕೊರಳೆತ್ತುವುದು.

ಅದು 1973ನೇ ಇಸ್ವಿ. ಆ ತನಕ ಮೈಸೂರು ಎಂದಿದ್ದ ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣವಾದ ವರ್ಷ. ನಾನಾಗ ಸರ್ಕಾರಿ ಶಾಲೆಯ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ. ಕುಣಿದಾಡಿದ್ದೇ ಕುಣಿದಾಡಿದ್ದು. ಹೈದರಾಬಾದ್ ಕರ್ನಾಟಕದ ಕೊನೆಯ ಕೊಂಡಿಯಂತಿದ್ದ ನನ್ನ ಅಪ್ಪನಿಗೆ 'ಇನ್ನು ಮೇಲೆ ಉರ್ದುವಿನಲ್ಲಿ ದಸಕತ್ತು ಹಾಕುವುದ ಬಿಟ್ಟು, ಕನ್ನಡದಲ್ಲಿ ಸಹಿ ಮಾಡುವುದ ಕಲಿ' ಎಂದು ತಾಕೀತು ಮಾಡಿ, ಸಿರಿಗನ್ನಡ ಅಕ್ಷರಗಳಲ್ಲಿ ತನ್ನ ಹೆಸರು ಬರೆಯುವುದನ್ನಷ್ಟೇ ಆತನಿಗೆ ತೋರಿಸಿಕೊಟ್ಟಿದ್ದೆ. 'ಅಪ್ಪನಿಗೆ ತಕ್ಕ ಗುರು' ಎಂದು ನನ್ನಷ್ಟಕ್ಕೆ ನಾನೇ ಬೀಗುತ್ತ. ಮೊದಲೇ ದೊಡ್ಡಾಟದ ಕಲಾವಿದನಾಗಿದ್ದ ಆತ 'ಆಯಿತು ಮಗನೇ, ಯಾಕಾಗಲೊಲ್ಲದು' ಎಂದು ತಲೆದೂಗಿದ್ದ. ಅದು ನನ್ನ ಪಾಲಿನ ಪುತ್ರವಾಕ್ಯ ಪರಿಪಾಲನೆಯೇ ಸೈ!

ಚರಿತ್ರೆ ಹಿಮ್ಮುಖವಾಗಿ ಚಲಿಸುವುದಿಲ್ಲವೆಂದು ಗೊತ್ತು. ಆದರೂ ಸವಿನೆನಪುಗಳಿಗೆ ಸಾವೆಂಬುದಿಲ್ಲವಲ್ಲ. ನಮ್ಮ ರಾಜ್ಯವು ಕರ್ನಾಟಕವೆಂದು ಘೋಷಿತವಾಗಿ ಇಂದಿಗೆ ಐವತ್ತು ತುಂಬುತ್ತಿರುವ ಈ ಹೊತ್ತಿನಲ್ಲಿ- ಆ ದಿನದ ಸ್ಮರಣಾರ್ಥ, ಹುಚ್ಚು ಖೋಡಿ ಮನಸ್ಸು ನೆನಪಿನ ಕುದುರೆಯೇರಿ ಐವತ್ತು ವರ್ಷ ಹಿಂದಕ್ಕೆ ಓಡಿದ್ದು ದಿಟ. ನಾನು ಅಕ್ಷರ ಬೆಳಕಿಗೆ ಬಿದ್ದ ಮೊದಲ ತಲೆಮಾರಿನವನಾಗಿದ್ದರಿಂದಾಗಿ ಹಾಗೆ ಗರಿಗೆದರಿದ ನೆನಪುಗಳಲ್ಲೆ ಕೆಲವನ್ನು ಹೆಕ್ಕಿ ಪೋಣಿಸಿದ ಅಕ್ಷರ ತೋರಣವಿದು. ನನ್ನ ಹುಟ್ಟಿದ ದಿನಾಂಕ ಸರ್ಕಾರಿ ಶಾಲೆಯ ಕನ್ನಡ ಮಾಸ್ತರರೇ ಅಂದಾಜಿಸಿ ಬರೆದುಕೊಂಡದ್ದು. ಹೀಗಾಗಿ ಅದು 5-8-58 ಎಂಬೋ 'PIN' - ದಾಖಲೆ. ಹೀಗಾಗಿ ಸದರಿ ದಿನಾಂಕದಂದು ಯಾರಾದರು ಜನ್ಮದಿನದ ಶುಭಾಶಯ ಹೇಳಿದರೆ ಸಾಕು, ಅದು ನನ್ನದಲ್ಲದ ಕಾರಣಕ್ಕೆ ನಾನು ಸಂಕೋಚದಿಂದ ಮುದುರಿಕೊಳ್ಳುತ್ತೇನೆ.

ಇನ್ನು ನನ್ನ ಹೆಸರಿನಲ್ಲಿನ ಮೊದಲಕ್ಷರವೊ ಇಂಗ್ಲಿಷ್ 'ಐ' ನ ಆ ಉಚ್ಚಾರಣೆ 'ಇರಪ್ಪ' ಆಗುತ್ತಿದ್ದುದಕ್ಕೆ, 'ಇನ್ನೂ ಇದ್ದೀನಪ್ಪ' ಅನ್ನಿಸುತ್ತದೆ. ಆದರೂ ಕನ್ನಡಿಗರ ಔದಾರ್ಯದಿಂದಾಗಿ 'ಇ' ಬದಲು ಬಾಯ್ತುಂಬ 'ಈರಪ್ಪ' ಎಂದೇ ಕರೆಸಿಕೊಂಡೆ. ಜೊತೆಗೆ, ಪತ್ರಿಕೆಗಳಲ್ಲಿನ 'ಓದುಗರ ವಿಭಾಗ'ಕ್ಕೆ ಬರೆಯುವ ಪತ್ರಗಳನ್ನೂ ಅದೇ ಹೆಸರಿನಲ್ಲಿ ಬರೆಬರೆದು ಸದರೀ 'ಈ' ಕಾರವನ್ನು ಅನ್ಯರಿಗೂ ರೂಢಿಸಿದೆನೆನ್ನಿರಿ. ಆದರೂ ಕುರಿ ತುಪ್ಪಟದಿಂದ ನೇಯ್ದ ದೇಶೀ ಕಂಬಳಿಯ ಪರಿಚಯವೇ ಇಲ್ಲದ ಬೆಂಗಳೂರಿಗರ ಬಾಯಲ್ಲಿ ಕಂಬಾಲಿ, ಕಾಂಬ್ಳೆ ಎಂದೆಲ್ಲ ಕರೆಸಿಕೊಂಡೆನೆನ್ನಿರಿ. ಅದು ನನ್ನ ಮೂಲ ಮನೆತನ ಶುದ್ಧ ಹೆಸರಿನ 'ಕರಿಯ ಕಂಬಳಿ ಗದ್ದಿಗೆಯ ಸೊಗಸು!' ಆ ಎಪ್ಪತ್ಮೂರರಿಂದ ಈ ಇಪ್ಪತ್ಮೂರರ ಐವತ್ತು ವರ್ಷಗಳ ನಡುವೆ ನಾನು ಕಂಡುಂಡ ಬದುಕಿನಾನುಭವದ ಸೋಜಿಗದ ಸಂಗತಿಗಳೆಷ್ಟೋ.

ಅದೇ ವರ್ಷ ಭೂಮಿಗೆ ಬಿದ್ದ ನನ್ನ ಒಡಹುಟ್ಟಿದವನ ಜನ್ಮ ದಿನಾಂಕವನ್ನು ಮಾತ್ರ ನನ್ನ ಹೈಸ್ಕೂಲ್ ನೋಟ್ ಬುಕ್ಕಿನ ಕೊನೆಯ ಪೇಜಿನಲ್ಲಿ ನಾನು ಬರೆದಿಟ್ಟಿದ್ದು ಅವನ ಅಧಿಕೃತ ದಾಖಲೆಯಾಯ್ತು ಬಲ್ಲಿರಾ? 'ಅಕ್ಷರ ಬೆಳಕು' ಎಂದರೆ ಇದೇ ತಾನೆ. ದುಡಿಯುವ ವರ್ಗದ ಜನರು ಹೀಗೆ ಅಕ್ಷರ ಪ್ರಪಂಚಕ್ಕೆ ಬಿದ್ದದ್ದೇ ಒಂದು ಆಕಸ್ಮಿಕ ಪವಾಡ ಸದೃಶ! ಅದಾಗಿ ಮತ್ತೆ ಹತ್ತು ವರ್ಷ ಕಳೆದು, ಸರ್ಕಾರಿ ಚಾಕರಿ ಮಾಡಲು ಕಂಬಳಿ ಹೊದ್ದೇ ಬೆಂಗಳೂರ ತೆಕ್ಕೆಗೆ ಬಂದು ಬಿದ್ದವನು ನಾನು. ವಸ್ತುಸ್ಥಿತಿ ಹೀಗಿರುವಾಗ 'ಕಂಬಳಿ' ಬಗ್ಗೆ ನನಗೇಕೆ ಇರಬೇಕು ಆ ಇಲ್ಲಸಲ್ಲದ ಕೀಳರಿಮೆ?

ಇನ್ನು ಆ ಕಾಲದ ನನ್ನೂರಿನ ಓದುಬಾಕ ಮುದುಕನೊಬ್ಬ ನನ್ನನ್ನು 'ಲೇಯ್ ವಿದ್ಯಾರ್ಥಿ' ಎಂದೇ ಪರ್ಯಾಯ ಹೆಸರಿಟ್ಟು ಕೂಗುತ್ತಿದ್ದ. 'ತಥಾಸ್ತು' ಎಂದು ಹೆಮ್ಮೆಯಿಂದಲೆ ಅದನ್ನು ಸ್ವೀಕರಿಸಿದ್ದೆ. ಅದಾಗಿ ಐವತ್ತು ವರ್ಷ ಗತಿಸಿದರೂ ನಾನಿನ್ನೂ ವಿದ್ಯಾರ್ಥಿಯಾಗೆ ಉಳಿದದ್ದು ಇದೆಂಥಾ ಸೋಜಿಗ! ಕಲಿಯುವುದಕ್ಕೆ ವಯಸ್ಸಿನ ಹಂಗಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಗಾಂಧಿವಾದಿ ಜಿ. ನಾರಾಯಣರ ಕಾಲದ ಪುಟಾಣಿ 'ರತ್ನ ಕೋಶ'ದಲ್ಲಿ ತಲೆ ತೂರಿಸಿ ವಿಹರಿಸುವುದೆಂದರೆ ಈಗಲೂ ನನಗೆ ಅದೆಂಥಾ ಆಪ್ಯಾಯಮಾನ!